ಕನ್ನಡಪ್ರಭ
ಮಂಗಳವಾರ 30.06.2026
ಹುಬ್ಬಳ್ಳಿ

ಸುದ್ದಿ ಸಿಂಚನ

ಪಾಲಿಕೆಯಿಂದ ಎಸ್ಐಆರ್ ಜಾಗೃತಿ

ಹುಬ್ಬಳ್ಳಿ: ರಾಜ್ಯಾದ್ಯಂತ ಮಂಗಳವಾರದಿಂದ ಆರಂಭವಾಗುವ ಮತದಾರರ ಪಟ್ಟಿಯ ಸಮಗ್ರ ಪರಿಷ್ಕರಣೆ ಹಿನ್ನೆಲೆ ನವನಗರದಲ್ಲಿ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವಲಯ ಕಚೇರಿ-4ರ ಸಿಬ್ಬಂದಿ ಪ್ರಮುಖ ರಸ್ತೆಯಲ್ಲಿ ವಿದ್ಯಾರ್ಥಿಗಳೊಂದಿಗೆ ಸಂಚರಿಸಿ ಜಾಗೃತಿ ಮೂಡಿಸಿದರು. ಪಾಲಿಕೆ ಆವರಣದಲ್ಲಿ ಜಾಗೃತಿ ಜಾಥಾಕ್ಕೆ ಚಾಲನೆ ನೀಡಲಾಯಿತು. ಎಸ್ಐಆರ್‌ನಿಂದ ಯಾರು ಭಯಪಡುವ ಅಗತ್ಯವಿಲ್ಲ. ಮನೆಗೆ ಬರುವ ಅಧಿಕಾರಿಗಳಿಗೆ ಮಾಹಿತಿ ನೀಡಿ. ಒಂದು ವೇಳೆ ಹೆಸರು ಬಿಟ್ಟು ಹೋಗಿದ್ದರೆ ಮತಪಟ್ಟಿಗೆ ಸೇರಿಸಲು, ಎರಡು ಕಡೆ ಹೆಸರಿದ್ದವರನ್ನು ಒಂದು ಕಡೆ ಡಿಲಿಟ್ ಮಾಡುವುದು, ಅನರ್ಹರನ್ನು ಮತಪಟ್ಟಿಯಿಂದ ಕೈಬಿಡಲಾಗುವುದು. ಹೀಗಾಗಿ ಅರ್ಹ ಮತದಾರರ ಭಯಕ್ಕೆ ಒಳಗಾಗಬಾರದು ಎಂದು ಮನವಿ ಮಾಡಿದರು. ಪಾಲಿಕೆ ಆವರಣದಲ್ಲಿ ಸಾಗಿದ ಜಾಗೃತಿ ಜಾಥಾದಲ್ಲಿ ಹೆಜ್ಜೆ ಹಾಕಿದ ಶಾಲಾ ವಿದ್ಯಾರ್ಥಿಗಳು ನವನಗರದ ಮುಖ್ಯ ರಸ್ತೆ ಸೇರಿದಂತೆ ವಿವಿಧೆಡೆ ಸಂಚರಿಸಿ ಮತದಾರರ ಪಟ್ಟಿಯ ಸಮಗ್ರ ಪರಿಷ್ಕರಣೆ ಕುರಿತು ಸಾರ್ವಜನಿಕರಿಗೆ ಮನವರಿಕೆ ಮಾಡಿದರು. ಈ ವೇಳೆ ವಲಯ ಕಚೇರಿ-04ರ ಸಹಾಯಕ ಆಯುಕ್ತ ಸಂತೋಷ ಆನಿಶೆಟ್ಟರ್, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಮಲ್ಲೇಶ ದೇಸೂರು, ಅಭಿಯಂತರರಾದ ಮಂಜುನಾಥ ದೊಡವಾಡ, ಶ್ರುತಿ ಶಲ್ಲಿಕೇರಿ, ಸೌಮ್ಯ ರಜಪೂತ್, ಆರೋಗ್ಯ ನಿರೀಕ್ಷಕರಾದ ಪ್ರಶಾಂತ ಶಿವಮೊಗ್ಗಿ, ಮಹೇಶ ಕಾಟೆ, ಭದ್ರಗೌಡ, ಮಹಾತೇಂಶ ಮಾಗೇರಿ ಸೇರಿದಂತೆ ಪಾಲಿಕೆ ಸಿಬ್ಬಂದಿ, ವಿದ್ಯಾರ್ಥಿಗಳು ಉಪಸ್ಥಿತರಿಸಿದ್ದರು.

ಕಲ್ಲಿನಿಂದ ಹಲ್ಲೆ ನಡೆಸಿ ಹತ್ಯೆ

ಹುಬ್ಬಳ್ಳಿ: ಹಣಕಾಸಿ ವಿಚಾರಕ್ಕೆ ಸಂಬಂಧಿಸಿ ಕಲ್ಲಿನಿಂದ ಹಲ್ಲೆ ನಡೆಸಿ ವ್ಯಕ್ತಿ ಓರ್ವನನ್ನು ಹತ್ಯೆ ಮಾಡಿದ ಘಟನೆ ಕಡಪಟ್ಟಿ-ಹಳ್ಯಾಳ ರಸ್ತೆಯ ಮಧ್ಯದ ರಸ್ತೆವೊಂದರಲ್ಲಿ ನಡೆದಿದೆ. ಸೆಟ್ಲ್‌ಮೆಂಟ್ ನಿವಾಸಿ ಈರಣ್ಣ ಹುರಕಡ್ಲಿ (45) ಎಂಬಾತನನ್ನು ಶಶಿಧರ ಚಿನ್ನೋಜಿ (35) ಹತ್ಯೆ ಮಾಡಿದ್ದಾನೆ. ಈರಣ್ಣ ಆಟೋ ಚಾಲಕನಾಗಿದ್ದು, ಇವನೊಂದಿಗೆ ಆರೋಪಿ ಶಶಿಧರ ಹಣಕಾಸಿನ ವ್ಯವಹಾರ ಮಾಡಿದ್ದಾನೆ. ಇದೇ ವಿಚಾರಕ್ಕೆ ಮಾತನಾಡುವುದಾಗಿ ಹೊಲಕ್ಕೆ ಕರೆದುಕೊಂಡು ಹೋಗಿದ್ದ. ಕುಡಿದ ಮತ್ತಿನಲ್ಲಿ ಜಗಳ ತೆಗೆದು, ಕಲ್ಲಿನಿಂದ ಹಲ್ಲೆ ನಡೆಸಿ ಕೊಲೆಗೆ ಯತ್ನಿಸಿದ್ದ. ಗಂಭೀರವಾಗಿ ಗಾಯಗೊಂಡ ಈರಣ್ಣನನ್ನು ನಗರದ ಕಿಮ್ಸ್ ಆಸ್ಪತ್ರೆಗೆ ಚಿಕಿತ್ಸೆ ರವಾನಿಸಲಾಗಿತ್ತು. ಚಿಕಿತ್ಸೆ ಫಲಿಸದೆ ಆತನ ಸೋಮವಾರ ನಿಧನನಾಗಿದ್ದಾನೆ. ಈ ಕುರಿತು ಬೆಂಡಿಗೇರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಮಹಾರಾಜಾ ಟ್ರೋಫಿ: ಗುಲ್ಬರ್ಗಾ ವಿರುದ್ಧ ಹುಬ್ಬಳ್ಳಿ ಟೈಗರ್ಸ್ ಗೆಲುವು

ಮೈಸೂರಿನಲ್ಲಿ ಹೀನಾಯ ಸೋತು, ಇಲ್ಲಿ ಅಭೂತಪೂರ್ವ ಗೆಲುವು | ಅಬ್ಬರಿಸಿದ ಮಯಾಂಕ್; ಮೊಹಮ್ಮದ್

ಗುಲ್ಬರ್ಗಾ ಮಿಸ್ಟಿಕ್ ವಿರುದ್ಧ ಆಕರ್ಷಕ ಬ್ಯಾಟಿಂಗ್ ಪ್ರದರ್ಶನ ನೀಡಿದ ನಾಯಕ ಮಯಾಂಕ್ ಅಗರ್ವಾಲ್ ಮತ್ತು ಮೊಹಮ್ಮದ್ ತಾಹ್.

ಗುರಿ ಬೆನ್ನಟ್ಟಿದ ಹುಬ್ಬಳ್ಳಿ ಟೈಗರ್ಸ್

ಗುರಿ ಬೆನ್ನಟ್ಟಿದ ಹುಬ್ಬಳ್ಳಿ ಟೈಗರ್ಸ್ ತಂಡ ಆರಂಭಿಕ ಬ್ಯಾಟರ್‌ಗಳಾದ ಮಯಾಂಕ್ ಅಗರವಾಲ್ (5 ಸಿಕ್ಸರ್, 8 ಬೌಂಡರಿಯೊಂದಿಗೆ 81★) ರನ್ ಹಾಗೂ ಮೊಹಮ್ಮದ್ ತಾಹ್(4 ಸಿಕ್ಸರ್, 4 ಬೌಂಡರಿ57★) ಅಮೋಘ ಅರ್ಧ ಶತಕದೊಂದಿಗೆ ತಂಡದ ಗೆಲುವಿಗೆ ಸಾಕ್ಷಿಯಾದರು. 73 ಎಸೆತಗಳಲ್ಲಿ 143 ರನ್‌ಗಳ ಜತೆಯಾಟದಲ್ಲಿ ಅಬ್ಬರಿಸಿದರು. ಈ ಮೂಲಕ ಇಬ್ಬರು ಗುಲ್ಬರ್ಗಾ ಮಿಸ್ಟಿಕ್ಸ್ ತಂಡದ ಬೌಲರ್‌ಗಳನ್ನು ಬಲವಾಗಿ ದಂಡಿಸಿದರು. ಈ ನಡುವೆ ಪಂದ್ಯ ಶ್ರೇಷ್ಠರಾಗಿ ವೈಭವ್ ಶರ್ಮಾ ಹೊರಹೊಮ್ಮಿದರು.

• **ಕನ್ನಡಪ್ರಭ ವಾರ್ತೆ** ಹುಬ್ಬಳ್ಳಿ

ಮಯಾಂಕ್ ಅಗರವಾಲ್ (81★), ಮೊಹಮ್ಮದ ತಾಹ್ (57★) ಆಕರ್ಷಕ ಬ್ಯಾಟಿಂಗ್ ಹಾಗೂ ವೈಭವ ಶರ್ಮಾನ ಬೌಲಿಂಗ್ ಪ್ರದರ್ಶನದಿಂದಾಗಿ ಹುಬ್ಬಳ್ಳಿ ಟೈಗರ್ಸ್ ವಿಕೆಟ್ ನಷ್ಟವಿಲ್ಲದೇ ಗುಲ್ಬರ್ಗಾ ಮಿಸ್ಟಿಕ್ಸ್ ವಿರುದ್ಧ ಅಭೂತ ಪೂರ್ವ ಜಯ ಸಾಧಿಸಿತು. ಇದರೊಂದಿಗೆ 5 ಅಂಕಗಳೊಂದಿಗೆ ಪಟ್ಟಿಯಲ್ಲಿ 4ನೇ ಸ್ಥಾನ ಪಡೆದುಕೊಂಡಿದೆ.

ಇಲ್ಲಿನ ರಾಜನಗರದ ಕೆಎಸ್‌ಸಿಎ ಮೈದಾನದಲ್ಲಿ ಸೋಮವಾರ ನಡೆದ ಮಹಾರಾಜಾ ಟ್ರೋಫಿ ಟಿ-20 ಕ್ರಿಕೆಟ್ ಟೂರ್ನಿಯ 16ನೇ ಪಂದ್ಯದಲ್ಲಿ ಎದುರಾಳಿಯಾಗಿದ್ದ ಗುಲ್ಬರ್ಗಾ ವಿರುದ್ಧ ಹುಬ್ಬಳ್ಳಿ ಟೈಗರ್ಸ್ 10 ವಿಕೆಟ್‌ನಿಂದ ತವರು ನೆಲದಲ್ಲಿ ಗೆಲುವು ಸಾಧಿಸಿತು. ಮೈಸೂರಲ್ಲಿ ನಡೆದ ಪಂದ್ಯದಲ್ಲಿ ಇದೇ ಗುಲ್ಬರ್ಗಾ ತಂಡದ ವಿರುದ್ಧ ಅತ್ಯಂತ ಹೀನಾಯ ಸೋಲು ಕಂಡಿದ್ದ ಹುಬ್ಬಳ್ಳಿ ಟೈಗರ್ಸ್ ಭರ್ಜರಿ ಗೆಲುವು ಸಾಧಿಸುವ ಮೂಲಕ ಸೇಡು ತೀರಿಸಿಕೊಂಡಿತು.

15 ಓವರ್‌ಗಳಿಗೆ ಸೀಮಿತ: ಮಳೆಯಿಂದಾಗಿ ಪಂದ್ಯವು 15 ಓವರ್‌ಗಳಿಗೆ ಸೀಮಿತಗೊಂಡಿತು. ಅಲ್ಲದೇ ಪಂದ್ಯ ಆರಂಭಕ್ಕೆ ಒಂದೂವರೆ ಗಂಟೆ ವಿಳಂಬ ಕೂಡ ಆಯ್ತು.

ಟಾಸ್ ಗೆದ್ದ ಹುಬ್ಬಳ್ಳಿ ಟೈಗರ್ಸ್ ತಂಡ ಮೊದಲು ಫಿಲ್ಡಿಂಗ್ ಆಯ್ದುಕೊಂಡಿತ್ತು. ಮೊದಲು ಬ್ಯಾಟಿಂಗ್ ಮಾಡಿದ ಗುಲ್ಬರ್ಗಾ ಮಿಸ್ಟಿಕ್ಸ್ ತಂಡ ನಿಗದಿತ 15 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 139 ರನ್ ಕಲೆಹಾಕಿತು. ವೈಭವ ಶರ್ಮಾ 2ನೇ ಓವರ್‌ನಲ್ಲಿ ಗುಲ್ಬರ್ಗಾ ಮಿಸ್ಟಿಕ್ಸ್‌ನ ಎರಡು ವಿಕೆಟ್ ಕಬಳಿಸಿದರು.

ಇದರಿಂದ ಗುಲ್ಬರ್ಗಾ ತಂಡಕ್ಕೆ ಆರಂಭದಲ್ಲೇ ಆಘಾತ ಉಂಟಾಯಿತು. ಮಧ್ಯಮ ಕ್ರಮಾಂಕದಲ್ಲಿ ಕಣಕ್ಕಿಳಿದ ತಿಪ್ಪಾರೆಡ್ಡಿ(51), ಅನುಭವಿ ಮನೀಷ್ ಪಾಂಡೆ(35) ಜವಾಬ್ದಾರಿಯುತ ಬ್ಯಾಟಿಂಗ್ ಪ್ರದರ್ಶಿಸಿ ತಂಡಕ್ಕೆ ನೆರವಾದರು. ಈ ಮಧ್ಯೆ ವೈಭವ್ 3 ವಿಕೆಟ್ ಪಡೆದು ಮಿಂಚಿದರು.

ಆಸ್ತಿ ವಿವಾದ: ಶಾಸಕರ ಕಚೇರಿ ಎದುರೇ ಚಾಕು ಇರಿದುಕೊಂಡ ವ್ಯಕ್ತಿ

• **ಕನ್ನಡಪ್ರಭ ವಾರ್ತೆ** ನವಲಗುಂದ

ಆಸ್ತಿ ಮಾರಾಟದ ವಿಷಯವಾಗಿ ನಡೆದ ಗಲಾಟೆಯಲ್ಲಿ ರೈತನೊಬ್ಬ ಚಾಕುವಿನಿಂದ ತನ್ನನ್ನು ತಾನೇ ಇರಿದುಕೊಂಡು ಆತ್ಮಹತ್ಯೆಗೆ ಯತ್ನಿಸಿದ ಘಟನೆ ತಾಲೂಕು ಪಂಚಾಯಿತಿ ಕಚೇರಿ ಆವರಣದಲ್ಲಿನ ಕಾಂಗ್ರೆಸ್ ಶಾಸಕ ಎನ್.ಎಚ್.ಕೋನರಡ್ಡಿ ಅವರ ಸಂಪರ್ಕ ಕಚೇರಿ ಎದುರೇ ಸೋಮವಾರ ನಡೆದಿದೆ.

ಈ ನಡುವೆ ಆತ್ಮಹತ್ಯೆಗೆ ಯತ್ನಿಸಿದ ರೈತನ ವಿರುದ್ಧ ತಮ್ಮ ಮೇಲೆ ಒತ್ತಡ ಹಾಕಲು ಆತ್ಮಹತ್ಯೆಗೆ ಯತ್ನಿಸಿದ್ದಾರೆ ಎಂದು ಯಮನೂರು ಗ್ರಾಪಂ ಪಿಡಿಓ ದೂರು ದಾಖಲಿಸಿದ್ದಾರೆ.

ತಾಲೂಕಿನ ಪಡೆಸೂರ ಗ್ರಾಮದ ಮಹಾಂತೇಶ ತುರನೂರ (38) ಆತ್ಮಹತ್ಯೆಗೆ ಯತ್ನಿಸಿದವ.

ಮಹಾಂತೇಶ ಇತ್ತೀಚಿಗೆ ತನ್ನ ಮನೆ ಮಾರಾಟ ಮಾಡಿ ಹಣವನ್ನು ಪಡೆದಿದ್ದ. ಉಪನೋಂದಣಿ ಕಚೇರಿಯಲ್ಲಿ ನೋಂದಣಿ ಕೂಡ ಮಾಡಿಸಿದ್ದ. ಆದರೆ, ಪಂಚಾಯಿತಿಗೆ ಆಗಮಿಸಿ ಆಸ್ತಿ ಮಾರಾಟ ಮಾಡಿದ ರಕಂ ತನಗೆ ಬಂದಿಲ್ಲ. ಆದಕಾರಣ ಖರೀದಿ ಪತ್ರ ಮಾಡಿಸಬಾರದು ಎಂದು ಲಿಖಿತ ತಕರಾರು ಅರ್ಜಿ ನೀಡಿದ್ದ. ಆಸ್ತಿ ಖರೀದಿ ಮಾಡಿದ ಶಂಕ್ರವ್ವ ಬಸಪ್ಪ ತುರನೂರ ಅವರು, ಆರ್‌ಟಿಜಿಎಸ್ ಮೂಲಕ ದುಡ್ಡನ್ನು ನೀಡಿರುವುದಾಗಿ ದಾಖಲೆ ನೀಡಿದ್ದರು. ಈ ಮಾಹಿತಿಯನ್ನು ಮಹಾಂತೇಶನ ಮೊಬೈಲ್‌ಗೆ ಕಳುಹಿಸಲಾಗಿತ್ತು. ಆದರೂ ಸೋಮವಾರ ಪಂಚಾಯಿತಿ ಕಚೇರಿಗೆ ಆಗಮಿಸಿ ಖರೀದಿ ಮಾಡಿಸಬಾರದು ಎಂದು ಕೋರಿದ್ದರೂ ಅದ್ಹೇಗೆ ಮಾಡಿಸಿದ್ದೀರಿ ಎಂದು ಜಗಳ ತೆಗೆದು, ತಮ್ಮ ಮೇಲೆ ಒತ್ತಡ ಹೇರಲು ಹಾಗೂ ಪ್ರಭಾವ ಬೀರಲು ಪ್ರಯತ್ನಿಸಿದ. ಬಳಿಕ ತನ್ನ ಹೊಟ್ಟೆಗೆ ತಾನೇ ಚಾಕುವಿನಿಂದ ಇರಿದು ಗಾಯಗೊಂಡಿದ್ದಾರೆ ಎಂದು ದೂರಿನಲ್ಲಿ ತಿಳಿಸಿದ್ದಾರೆ.

ದೂರಿನ್ವಯ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ತನಿಖೆ ಮುಂದುವರಿಸಿದ್ದಾರೆ.

ರಕ್ತದ ಮಡುವಿನಲ್ಲಿ ಬಿದ್ದಿದ್ದ ಮಹಾಂತೇಶನನ್ನು ತಕ್ಷಣವೇ ಸಾರ್ವಜನಿಕರು ಹಾಗೂ ಪೊಲೀಸರು ಸಾರ್ವಜನಿಕ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿದ್ದಾರೆ. ಅಲ್ಲದೇ, ಅಲ್ಲಿಂದ ಹುಬ್ಬಳ್ಳಿ ಕೆಎಂಸಿಆರ್‌ಐಗೆ ರವಾನಿಸಿದ್ದಾರೆ.

ನವಲಗುಂದ ಠಾಣೆಯ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಗೋವಾ ಕನ್ನಡ ಶಾಲೆ ಉಳಿಸಲು ಸಿಎಂ, ಕೇಂದ್ರ ಸಚಿವರಿಗೆ ಪತ್ರ

ಕನ್ನಡಪ್ರಭದಲ್ಲಿ ಪ್ರಕಟವಾಗಿದ್ದ ವಿಶೇಷ ವರದಿ ಆಧರಿಸಿ ಪತ್ರ

ಕನ್ನಡಪ್ರಭದಲ್ಲಿ ಪ್ರಕಟವಾಗಿದ್ದ ವರದಿ.

- ಕನ್ನಡ ಅಭಿವೃದ್ಧಿ ಪ್ರಾಧಿಕಾರದಿಂದ ಕೇಂದ್ರ ಶಿಕ್ಷಣ ಸಚಿವ, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರಗೆ ಪತ್ರ
- ಇಲಾಖಾಧಿಕಾರಿ ಜತೆಗೆ ಸಚಿವರನ್ನೊಳಗೊಂಡ ನಿಯೋಗ ಕಳುಹಿಸಲು ಮನವಿ

• **ಕನ್ನಡಪ್ರಭ ವಾರ್ತೆ** ಧಾರವಾಡ

ಹಲವು ದಶಕಗಳಿಂದ ಗೋವಾದಲ್ಲಿ ನಡೆಯುತ್ತಿದ್ದ ಕನ್ನಡ ಮಾಧ್ಯಮ ಶಾಲೆಗಳನ್ನು ಮುಚ್ಚಲು ಅಲ್ಲಿನ ಸರ್ಕಾರ ರಾಷ್ಟ್ರೀಯ ಶಿಕ್ಷಣ ನೀತಿಯ ಅನುಷ್ಠಾನದ ನೆಪದಲ್ಲಿ ಸಿದ್ಧತೆ ನಡೆಸಿರುವುದನ್ನು ಖಂಡಿಸಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ. ಪುರುಷೋತ್ತಮ ಬಿಳಿಮಲೆ ಅವರು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ ಹಾಗೂ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಅವರಿಗೆ ಪತ್ರ ಬರೆದಿದ್ದಾರೆ.

'ಗೋವಾ ಕನ್ನಡ ಮಾಧ್ಯಮ ಶಾಲೆಗೆ ಗೇಟ್‌ಪಾಸ್' ಶೀರ್ಷಿಕೆ ಅಡಿ 'ಕನ್ನಡಪ್ರಭ' ಸೋಮವಾರ ವಿಶೇಷ ವರದಿ ಪ್ರಕಟಿಸಿದ ಹಿನ್ನೆಲೆಯಲ್ಲಿ ಪತ್ರ ಬರೆದಿರುವ ಪ್ರಾಧಿಕಾರದ ಅಧ್ಯಕ್ಷರು, ಕೂಡಲೇ ಶಿಕ್ಷಣ ಇಲಾಖಾಧಿಕಾರಿಗಳು ಮತ್ತು ಸಚಿವರನ್ನೊಳಗೊಂಡ ನಿಯೋಗವೊಂದನ್ನು ಗೋವಾಕ್ಕೆ ಕಳುಹಿಸಿ ಅಲ್ಲಿನ ಸರ್ಕಾರದೊಂದಿಗೆ ಮಾತುಕತೆ ನಡೆಸುವ ಮೂಲಕ ಕನ್ನಡಿಗರ ಶೈಕ್ಷಣಿಕ ಮತ್ತು ಸಾಂವಿಧಾನಿಕ ಭಾಷಾ ಹಕ್ಕುಗಳ ರಕ್ಷಣೆಗೆ ಅಗತ್ಯ ಕ್ರಮತೆಗೆದುಕೊಳ್ಳಬೇಕೆಂದು ಮುಖ್ಯಮಂತ್ರಿಗೆ ಮನವಿ ಮಾಡಿದ್ದಾರೆ.

ಗೋವಾ, ಕೇರಳಂ, ಆಂಧ್ರಪ್ರದೇಶ, ತೆಲಂಗಾಣ ಹಾಗೂ ಮಹಾರಾಷ್ಟ್ರದ ಗಡಿಭಾಗಗಳಲ್ಲಿರುವ ಸಾವಿರಾರು ಕನ್ನಡಿಗ ಮಕ್ಕಳು 1ರಿಂದ 10ನೇ ತರಗತಿ ವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿ ನಂತರ ಉನ್ನತ ಶಿಕ್ಷಣಕ್ಕಾಗಿ ಕರ್ನಾಟಕಕ್ಕೆ ಬರುವ ಪರಂಪರೆ ಇದೆ. ಈ ಹಿನ್ನೆಲೆಯಲ್ಲಿ ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಮುಂದಿನ ಉನ್ನತ ಶಿಕ್ಷಣಕ್ಕೆ ಕನ್ನಡ ಮಾಧ್ಯಮದಲ್ಲಿ ಅವಕಾಶಗಳಿರದ ಕಾರಣ ವಿದ್ಯಾರ್ಥಿಗಳು ಬದಲಾದ ಪರಸ್ಥಿತಿಗೆ ಹೊಂದಿಕೊಳ್ಳಬೇಕು ಎಂಬ ಅಭಿಪ್ರಾಯ ವ್ಯಕ್ತಪಡಿಸಿರುವುದು ಕನ್ನಡಿಗರಲ್ಲಿ ಆತಂಕ ಹೆಚ್ಚಿಸಿದೆ. ಇದು ಆ ರಾಜ್ಯದ ಕನ್ನಡ ಮಾಧ್ಯಮ ಶಿಕ್ಷಣದ ಭವಿಷ್ಯದ ಮೇಲೆ ಮರಣ ಶಾಸನವನ್ನು ಬರೆದಂತಾಗಿದೆ ಎಂದು ರಾಜ್ಯ ಸರ್ಕಾರವನ್ನು ಎಚ್ಚರಿ ಸಿದ್ದಾರೆ.

ಕೇಂದ್ರಕ್ಕೂ ಪತ್ರ: ಗೋವಾದಲ್ಲಿ ಕನ್ನಡ ಮಾಧ್ಯಮ ಶಾಲೆಗಳಿಗೆ ಸಂಬಂಧಿಸಿದ ತೀವ್ರ ತೊಂದರೆದಾಯಕ ಬೆಳವಣಿಗೆಗಳ ಬಗ್ಗೆಯೂ ಬಿಳಿಮಲೆ ಅವರು ಪತ್ರದ ಮುಖೇನ ಕೇಂದ್ರ ಶಿಕ್ಷಣ ಸಚಿವರ ಗಮನ ಸೆಳೆದಿದ್ದಾರೆ. ಗೋವಾದಲ್ಲಿ ಕನ್ನಡದ ಶಾಲೆಗಳನ್ನು ಮುಚ್ಚುವುದು ಕೇವಲ ಆಡಳಿತಾತ್ಮಕ ನಿರ್ಧಾರವಲ್ಲ, ಇದು ಭಾಷಾ ಅಲ್ಪಸಂಖ್ಯಾತರ ಹಕ್ಕುಗಳ ಮೇಲೆ ದೂರಗಾಮಿ ಪರಿಣಾಮಗಳನ್ನು ಬೀರುತ್ತ ದೆ. ತಲೆಮಾರುಗಳಿಂದ ಗೋವಾದ ಕನ್ನಡ ಮಾತನಾಡುವ ಕುಟುಂಬಗಳು ಮಾತೃ ಭಾಷಾ ಶಿಕ್ಷಣದ ಮೂಲಕ ತಮ್ಮ ಭಾಷೆ, ಸಂಸ್ಕೃತಿ ಮತ್ತು ಗುರುತನ್ನು ಸಂರಕ್ಷಿಸಿವೆ. ಈಗ ಎಲ್ಲದಕ್ಕೂ ಹೊಡೆತ ಬಿದ್ದಂತಾಗಿದೆ. ಆದ್ದರಿಂದ ಗೋವಾದಲ್ಲಿರುವ ಕನ್ನಡ ಮಾಧ್ಯಮ ಶಾಲೆಗಳನ್ನು ರಕ್ಷಿಸಲು ಮತ್ತು ಅಲ್ಲಿನ ಕನ್ನಡಿಗರ ಹಕ್ಕುಗಳನ್ನು ರಕ್ಷಿಸಲು ಕೇಂದ್ರವು ಮಧ್ಯಪ್ರವೇಶಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲು ಬಿಳಿಮಲೆ ಮನವಿ ಮಾಡಿದ್ದಾರೆ.

ಚಿನ್ಮಯ ಮಹಾವಿದ್ಯಾಲಯ: ವನಮಹೋತ್ಸವ

• **ಕನ್ನಡಪ್ರಭ ವಾರ್ತೆ** ಹುಬ್ಬಳ್ಳಿ

ಇಲ್ಲಿನ ಚಿನ್ಮಯ ಪದವಿ ಪೂರ್ವ ಮತ್ತು ಪದವಿ ಮಹಾವಿದ್ಯಾಲಯದಲ್ಲಿ ಸಸಿ ನೆಡುವ ಮೂಲಕ ವನ ಮಹೋತ್ಸವ ಆಚರಿಸಲಾಯಿತು.

ವಿದ್ಯಾರ್ಥಿಗಳಿಗೆ ವಾತಾವರಣ ಸಂರಕ್ಷಣೆ, ಗಿಡಗಳ ಮಹತ್ವ, ಕಲುಷಿತ ವಾತಾವರಣದ ಬಗ್ಗೆ ತಿಳಿಸಲಾಯಿತು. ಇಂದಿನ ಮಕ್ಕಳು ನಾಳೆಯ ಉತ್ತಮ ಪ್ರಜೆಗಳನ್ನಾಗಿ ಮಾಡುವ ನಿಟ್ಟಿನಲ್ಲಿ ನಾವೆಲ್ಲರೂ ಶ್ರಮಿಸಬೇಕೆಂದು ಸಂಸ್ಥೆಯ ಆಡಳಿತಾಧಿಕಾರಿ ವಿಶ್ವನಾಥ ರಾನಡೆ ಕರೆ ನೀಡಿದರು.

ಈ ವೇಳೆ ಪ್ರಾಂಶುಪಾಲರಾದ ಶರ್ಮಿಲಿ ನಾಯ್ಡು, ವಿದ್ಯಾರ್ಥಿಗಳು, ಎನ್‌ಎಸ್‌ಎಸ್ ಕಾರ್ಯಕ್ರಮ ಅಧಿಕಾರಿಗಳು, ಬೋಧಕ-ಬೋಧಕೇತರ ಸಿಬ್ಬಂದಿ ಉಪಸ್ಥಿತರಿದ್ದರು.

ಹುಬ್ಬಳ್ಳಿಯ ಚಿನ್ಮಯ ಪದವಿ ಪೂರ್ವ ಮತ್ತು ಪದವಿ ಮಹಾವಿದ್ಯಾಲಯದಲ್ಲಿ ಸಸಿ ನೆಡುವ ಮೂಲಕ ವನ ಮಹೋತ್ಸವ ಆಚರಿಸಲಾಯಿತು.

MANAPPURAM FINANCE LTD.

CIN : L65910KL1992PLC006623
Registered Office : W - 4/ 638A, Manappuram House,
P.O. Valapad, Thrissur - 680 567, Kerala, India

ಹರಾಜು ಪ್ರಕಟಣೆ

ಈ ಕೆಳಗಿನ ಖಾತೆಗಳಲ್ಲಿ ಅಡವಿಟ್ಟಿರುವ ಚಿನ್ನಾಭರಣಗಳ ಸಾರ್ವಜನಿಕ ಹರಾಜನ್ನು 16/07/2026 ರಂದು ಬೆಳಿಗ್ಗೆ 10.00 ಗಂಟೆಯಿಂದ ಈ ಕೆಳಗಿನ ಶಾಖೆಗಳಲ್ಲಿ ನಡೆಸಲು ಉದ್ದೇಶಿಸಲಾಗಿದೆ ಎಂದು ಈ ಮೂಲಕ ವಿಶೇಷವಾಗಿ ಸಾಲಗಾರರಿಗೆ ಮತ್ತು ಸಾರ್ವಜನಿಕರಿಗೆ ತಿಳಿಸಲಾಗಿದೆ. ನೋಂದಾಯಿತ ಪತ್ರಗಳ ಮೂಲಕ ತಿಳಿಸಲಾಗಿದ್ದರೂ ಸಾಲದ ಮೊತ್ತವನ್ನು ಪಾವತಿಸಲು ವಿಫಲರಾದ ಸುಸ್ತಿದಾರ ಗ್ರಾಹಕರ ಚಿನ್ನದ ಆಭರಣಗಳನ್ನು ಹರಾಜು ಮಾಡಲಾಗುತ್ತದೆ. ಹರಾಜಾಗದ ವಸ್ತುಗಳನ್ನು ಯಾವುದೇ ಸೂಚನೆ ಇಲ್ಲದೆ ಬೇರೆ ಯಾವುದೇ ದಿನಗಳಲ್ಲಿ ಹರಾಜು ಮಾಡಲಾಗುವುದು. ಹರಾಜಿನ ದಿನಾಂಕದಂದು ಚಿನ್ನದ ಮಾರುಕಟ್ಟೆ ಬೆಲೆ ಅಥವಾ ಸರಾಸರಿ 30 ದಿನಗಳ IBJA ದರದ 85%, ಯಾವುದು ಹೆಚ್ಚೋ ಅದರ ಆಧಾರದ ಮೇಲೆ ಮೀಸಲು ಬೆಲೆಯನ್ನು ನಿಗದಿಪಡಿಸಲಾಗುತ್ತದೆ. ಸ್ಥಳ ಅಥವಾ ದಿನಾಂಕದಲ್ಲಿನ ಬದಲಾವಣೆಯನ್ನು (ಯಾವುದಾದರೂ ಇದ್ದರೆ) ಹರಾಜು ಕೇಂದ್ರದಲ್ಲಿ ಮತ್ತು ಕಂಪನಿಯ ವೆಬ್‌ಸೈಟ್‌ನಲ್ಲಿ ಪ್ರದರ್ಶಿಸಲಾಗುತ್ತದೆ. ಕೆಳಗೆ ನೀಡಲಾದ ವಿವರಗಳು ಶಾಖೆಯ ಹೆಸರು, ಸಾಲದ ಸಂಖ್ಯೆ, ಗ್ರಾಹಕರ ಹೆಸರು, ಒಟ್ಟು ಬಾಕಿ ಮೊತ್ತ ('ನಲ್ಲಿ) ಐಟಂ ಹೆಸರಿನ ಕ್ರಮದಲ್ಲಿದೆ

ಅಡವುಗಳ ಪಟ್ಟಿ :

ಧಾರವಾಡ, ಅಳ್ನಾವರ, 8954, ಮಂಜುನಾಥ್ ರೆಡೇಕರ್, 29404/–, ಫಿಂಗರ್ ರಿಂಗ್ಸ್ 1, 0115580730029105, ಜುಂಜಪ್ಪ ಇರಪ್ಪ ಕುರಗುಂದ, 42549/–, ಡ್ರಾಪ್ಸ್ & ಸ್ಟಡ್ 1, ಉತ್ತರ ಕರ್ನಾಟಕ, ಅಂಕೋಲಾ, 7993, ರಾಜು ಥಾಕು ಗಾಂವ್ಕರ್, 27020/–, ಚೈನ್ 1, ಧಾರವಾಡ, ಅಣ್ಣಿಗೇರಿ, 9259, ಅಂಬವ್ವ ಉಪ್ಪಾರ್, 15000/–, ಬೆಲ್ಟ್ 1, 0128680700049383, ಇಮಾಮಸಾಬ್ ಅಲ್ಲಿಸಾಬ್ ದಾರವನ್, 91000/–, ನೆಕ್ ಲೇಸ್ 1, 1642, ಚೇತನ ಶ್ರೀಗಿರಿ ಕಿರೇಸೂರು, 40026/–, ಡ್ರಾಪ್ಸ್ & ಸ್ಟಡ್ 1, 0128680730011703, ದಾವಲ್ಸಾಬ್ ಅಲಿಸಾಬ್ ದರ್ವಾನ್, 67894/–, ನೆಕ್ ಲೇಸ್ 1, 0128680730011713, ನಜೀರಸಾಬ್ ಮೌಲಾಸಾಬ್ ನಾಡುವಿನಮಣಿ, 130528/–, ನೆಕ್ ಲೇಸ್ 1, 0128680730011714, ನಜೀರಸಾಬ್ ಮೌಲಾಸಾಬ್ ನಾಡುವಿನಮಣಿ, 66452/–, ಬ್ರೇಸ್ ಲೆಟ್ 1, 0128680730011715, ನಜೀರಸಾಬ್ ಮೌಲಾಸಾಬ್ ನಾಡುವಿನಮಣಿ, 31302/–, ಫಿಂಗರ್ ರಿಂಗ್ಸ್ 1, ಬಳ್ಳಾರಿ, ಬೆಂಗಳೂರು ರೋಡ್ ಬಳ್ಳಾರಿ, 9990, ಬಿ ಬಸವರಾಜ್, 29401/–, ಡ್ರಾಪ್ಸ್ 1, ಬಳ್ಳಾರಿ, ಬಳ್ಳಾರಿ, 0389, ರಾಘವೇಂದ್ರ, 130237/–, ನೆಕ್ ಲೇಸ್ 1, 0125380730040390, ಚೆಟ್ಟೆಮ್ಮ, 31307/–, ಫಿಂಗರ್ ರಿಂಗ್ಸ್ 1, 0125380730040393, ಲೋಕನಾಥ್ ಕೆ , 29490/–, ಡ್ರಾಪ್ಸ್ & ಸ್ಟಡ್ 1, ಧಾರವಾಡ, ಬೆಟಗೇರಿ, 9892, ತುಕಾರಾಂ ಕಟವಟೆ, 13600/–, ಉ–ಡ್ರಾಪ್ಸ್ 1, 0835, ಲಕ್ಷ್ಮಿ ಜಯನವರ್, 25840/–, ಡ್ರಾಪ್ಸ್ & ಸ್ಟಡ್ 1, ಉತ್ತರ ಕರ್ನಾಟಕ, ಭಟ್ಕಳ್, 2388, ಉಮೇಶ್ ಪದ್ಮಯ್ಯ ನಾಯ್ಕ್, 147028/–, ಚೈನ್ 1, 0114050730012473, ವಿನೋದ್ ರಾಮ ಮೋಗೇರ್, 22018/–, ಫಿಂಗರ್ ರಿಂಗ್ಸ್ 1, ಬಳ್ಳಾರಿ, ಬ್ರೂಸ್ ಪಿಇಟಿ ಬಳ್ಳಾರಿ, 8727, ಅಪ್ಪು ನಾಲ್ಕ್, 92492/–, ಚೈನ್ 1, 0551, ಸ್ವಾಮಿ ನಾಯಕ್, 265708/–, ಫಿಂಗರ್ ರಿಂಗ್ಸ್ 1,ಉ–ಡ್ರಾಪ್ಸ್ & ಸ್ಟಡ್ 1,ಚೈನ್ 1, ಬಳ್ಳಾರಿ, ಬಜ್ಜರ್, ಬಳ್ಳಾರಿ, 8459, ಶಹೀನ್ ಬಾನು, 35938/–, ಮಟ್ಟಿ 1, ಉತ್ತರ ಕರ್ನಾಟಕ, ದಾಂಡೇಲಿ, 2938, ರತ್ನ ಶ್ರೀಕಾಂತ್ ಬಂದಿವಾಡರು, 11500/–, ಡ್ರಾಪ್ಸ್ 1, 0114540700053036, ಇಮ್ತಿಯಾಜ್ ಹಸನ್ ಖಾನ್, 16420/–, ಫಿಂಗರ್ ರಿಂಗ್ಸ್ 1, 9664, ಕಿರಣಕುಮಾರ್ ಅಣ್ಣಪ್ಪ ಉದಂಡಿ, 47507/–, ಫಿಂಗರ್ ರಿಂಗ್ಸ್ 1, 0114540730029797, ನಯೋಮೆ ಡೇವಿಡ್ ಕರ್ರಾ, 41887/–, ಫಿಂಗರ್ ರಿಂಗ್ಸ್ 1, ಗದಗ , ಗದಗ , 5590, ಮನಸೂರಹ್ಮದ್ ಶಿರಹಟ್ಟಿ, 95000/–, ಫಿಂಗರ್ ರಿಂಗ್ಸ್ 1,ನೆಕ್ ಲೇಸ್ 1, 7772, ಆಕಾಶ ಕಳಸಗೊಂಡ, 173082/–, ಫಿಂಗರ್ ರಿಂಗ್ಸ್ 2,ಚೈನ್ 1, 0111780730017903, ಸುಖಾನಂದ ಭಾವಿಕಟ್ಟಿ, 13000/–, ಫಿಂಗರ್ ರಿಂಗ್ಸ್ 1, ಗದಗ ಮೇನ್ ರೋಡು, 9198, ಮೈನುದ್ದೀನ್ ಹೊನ್ನಾಪುರ, 15000/–, ಉ–ಡ್ರಾಪ್ಸ್ & ಸ್ಟಡ್ 1, ಗಜೇಂದ್ರಗಡ, 0177, ಪರಸಪ್ಪ , 191007/–, ಚೈನ್ 1, ಧಾರವಾಡ, ಗಾಂಧಿನಗರ ಪಿ ಬಿ ರೋಡು, 9947, ಮಂಜುನಾಥ್ ಕರಿಕಟ್ಟಿ, 35500/–, ಚೈನ್ 1, ಕೊಪ್ಪಳ , ಗಂಗಾವತಿ ಬಸ್ ಸ್ಟ್ಯಾಂಡ್, 6420, ವೆಂಕಟೇಶ, 60076/–, ಚೈನ್ 1, ಹಾವೇರಿ, ಗೌಳೀ ಗಲ್ಲೀ ರಾಣೇ ಬೆನ್ನೂರು, 2695, ಸತ್ಯಮೂರ್ತಿ ಲಮಾಣಿ, 96941/–, ಚೈನ್ 1, 0132560730022696, ಸತ್ಯಮೂರ್ತಿ ಲಮಾಣಿ, 176505/–, ಚೈನ್ 1, 0132560730022697, ಸತ್ಯಮೂರ್ತಿ ಲಮಾಣಿ, 81109/–, ಫಿಂಗರ್ ರಿಂಗ್ಸ್ 1,ಡ್ರಾಪ್ಸ್ & ಸ್ಟಡ್ 1, ಹಾವೇರಿ, ಹಲಿಗೇರಿ ಮೇನ್ ರೋಡು ರಾಣೇ ಬೆನ್ನೂರು, 4762, ಶ್ರೇಯಸ್ ಎಸ್ ಬಾದಾಮಿ, 40580/–, ಫಿಂಗರ್ ರಿಂಗ್ಸ್ 1, 0125260730024847, ವಿನಾಯಕ ಕುಮಾರ್ ಪಾಟೀಲ್, 130007/–, ನೆಕ್ ಲೇಸ್ 1, 0125260730025026, ಭರಮಪ್ಪ ಕರಿಯಪ್ಪ ಕಂಬಳಿ, 174067/–, ಚೈನ್ 1, ಉತ್ತರ ಕರ್ನಾಟಕ, ಹಳಿಯಾಳ, 5863, ದಸ್ತಗೀರ್ ಹಸನ್ಸಾಬ್ ಮುಜಾವರ್, 22018/–, ಲಾಕೆಟ್ 1, 0118770730026031, ದಿನೇಶ್ ಪೀರಪ್ಪ ಲಮಾಣಿ, 24031/–, ಡ್ರಾಪ್ಸ್ & ಸ್ಟಡ್ 1, 0118770730026165, ಜ್ಞಾನದೇವ್ ಘಾಟಗೆ, 29721/–, ಫಿಂಗರ್ ರಿಂಗ್ಸ್ 1, ಹಾವೇರಿ, ಹಿರೇಕೆರೂರು, 7566, ಸತ್ಯವತಿ, 24000/–, ಡ್ರಾಪ್ಸ್ 1, ಬಳ್ಳಾರಿ, ಹೊಸಪೇಟೆ, 3210, ಸಾದಿಕ್, 62780/–, ಡ್ರಾಪ್ಸ್ & ಸ್ಟಡ್ 1, 0120590730033212, ಸಾದಿಕ್, 24120/–, ಸ್ಟಡ್ 1,ಇಯರ್ ರಿಂಗ್ಸ್ 1, 0120590730033213, ಸಾದಿಕ್, 71910/–, ಡ್ರಾಪ್ಸ್ & ಸ್ಟಡ್ 1, 0120590730033214, ಸಾದಿಕ್, 87630/–, ಫಿಂಗರ್ ರಿಂಗ್ಸ್ 1,ನೆಕ್ ಲೇಸ್ 1, 0120590730033215, ಸಾದಿಕ್, 15490/– , ಲಾಕೆಟ್ 1, ಹೊಸಪೇಟೆ ಧಂ ರೋಡ್, 3157, ರಮೇಶ್ ನಾಯಕ್, 29000/–, ಫಿಂಗರ್ ರಿಂಗ್ಸ್ 1, 0123930700043204, ಎಸ್ ಕೀರ್ತನಾ, 57057/–, ಉ–ಡ್ರಾಪ್ಸ್ 1, 0123930700045217, ರಾಮನ್‌ಜಿ, 44000/–, ಸ್ಟಡ್ 1, ಧಾರವಾಡ, ಹೊಸೂರು ರೋಡು ಹುಬ್ಬಳ್ಳಿ, 1809, ಅಜಿ ಕೆ.ಆರ್., 95000/–, ಚೈನ್ 1, 8384, ವಿಶ್ವನಾಥ ಕಳ್ಳಿಮಠ, 35630/–, ಚೈನ್ 1, 0115240730028456, ಮೊಹಮ್ಮದ್ ಸುಹೇಲ್ ಖಾನ್, 97451/–, ನೆಕ್ ಲೇಸ್ 1, ಧಾರವಾಡ, ಹುಬ್ಬಳ್ಳಿ, 4736, ರೇಖಾ ಚೌಧರಿ, 45003/–, ಫಿಂಗರ್ ರಿಂಗ್ಸ್ 1, ಕೊಪ್ಪಳ , ಜವಾಹರ ಮೇನ್ ರೋಡು ಕೊಪ್ಪಳ, 5936, ಅಬ್ದುಲ್ ಅಜೀಜ್ , 43900/–, ಸ್ಟಡ್ 1, ಉತ್ತರ ಕರ್ನಾಟಕ, ಕಾಜುಬಾಣ್ ಮೇನ್ ರೋಡು ಕಾರವಾರ, 3036, ಸಂಜೀವ್ ಯಡೋಬ ಖಾರ್ವಿ, 25000/–, ಸ್ಟಡ್ 1, ಧಾರವಾಡ, ಕಲಘಟಗಿ, 7077, ಶಿವಪುತ್ರ ಕಿಲ್ಲೆಕೇಟರ್, 14600/–, ಸ್ಟಡ್ 1, 7341, ಸುರೇಶ್ ಬಸಪ್ಪ ಹೊಸವಾಕಲ್, 35004/–, ಫಿಂಗರ್ ರಿಂಗ್ಸ್ 1, 0122710730027361, ಶ್ರೀಕಾಂತವ ನಿಂಗಪ್ಪ ಗಡಾದ್, 19346/–, ಡ್ರಾಪ್ಸ್ & ಸ್ಟಡ್ 1, ಬಳ್ಳಾರಿ, ಕಂಪ್ಲಿ, 5211, ಜಾಫರ್ ಸಾಧಿಕ್, 7430/–, ಲಾಕೆಟ್ 1, 0123520730027288, ಎ ವಿಶ್ವನಾಥ್, 76610/–, ಚೈನ್ 1, 0123520730031857, ಯು ಸುರೇಶ್, 25015/–, ಸ್ಟಡ್ 1, ಕೊಪ್ಪಳ , ಕಾರಡಗಿ, 6541, ಶಿವು, 70007/–, ಫಿಂಗರ್ ರಿಂಗ್ಸ್ 1,ಸ್ಟಡ್ 1,ಉ–ಡ್ರಾಪ್ಸ್ 1, 0136240730016545, ಕಾವ್ಯ, 84700/–, ಫಿಂಗರ್ ರಿಂಗ್ಸ್ 1, 0136240730016569, ಪರಶುರಾಮ್, 27540/–, ಉ–ಡ್ರಾಪ್ಸ್ 1, ಧಾರವಾಡ, ಕೇಶ್ವಾಪುರ ಹುಬ್ಬಳ್ಳಿ, 7045, ಮೊಹಮ್ಮದ್ ಸುಹೇಲ್ ಖಾನ್, 36000/–, ಫಿಂಗರ್ ರಿಂಗ್ಸ್ 1,ಲಾಕೆಟ್ 1,ಇಯರ್ ರಿಂಗ್ಸ್ 1, 2108, ರಾಜೇಶ್ ಕಳಾರಿ, 20109/–, ಫಿಂಗರ್ ರಿಂಗ್ಸ್ 1, 0123170730042942, ಅಂಬಡ್ಪುಡಿ ಮೋಸಸ್, 22504/–, ಫಿಂಗರ್ ರಿಂಗ್ಸ್ 1, ಗದಗ , ಕಿರಾಣಿ ಬಜಾರ್ ನರಗುಂದ, 7291, ದೀಪಾ ಮುದಿಗೌಡ ಮುದಿಗೌಡ್ರ, 25000/–, ಉ–ಡ್ರಾಪ್ಸ್ & ಸ್ಟಡ್ 1, 3871, ಅಸೀಫ್ ಇಕ್ಬಲ್, 33430/–, ಡ್ರಾಪ್ಸ್ & ಸ್ಟಡ್ 1, 0133270730013872, ಅಸೀಫ್ ಇಕ್ಬಲ್, 32700/–, ಫಿಂಗರ್ ರಿಂಗ್ಸ್ 1, 0133270730013923, ದೀಪಾ ಮುದಿಗೌಡ ಮುದಿಗೌಡ್ರ, 27614/–, ಚೈನ್ 1, ಕೊಪ್ಪಳ , ಕೊಪ್ಪಳ ಮೇನ್ ರೋಡು, 3709, ರೇಖಾ, 306000/–, ಚೈನ್ 2, 0830, ರೇಖಾ, 158002/–, ನೆಕ್ ಲೇಸ್ 1, ಉತ್ತರ ಕರ್ನಾಟಕ, ಕುಮಟಾ, 4847, ರವೀಂದ್ರ ರಾಮಚಂದ್ರ ನಾಯ್ಕ್, 170002/–, ನೆಕ್ ಲೇಸ್ 1, 0113610730014935, ರವೀಂದ್ರ ರಾಮಚಂದ್ರ ನಾಯ್ಕ್, 250002/–, ಬ್ಯಾಂಗಲ್ 2,ನೆಕ್ ಲೇಸ್ 1, 0113610730015016, ರವೀಂದ್ರ ರಾಮಚಂದ್ರ ನಾಯ್ಕ್, 36197/–, ಫಿಂಗರ್ ರಿಂಗ್ಸ್ 1,ಚೈನ್ 1, ಕುಮಟಾ ನೆಲ್ಲಿಕಾರೆ ರೋಡು, 5478, ಮಾದೇವ ಮಾರಪ್ಪ ಪಟಗಾರ, 10900/–, ಇಯರ್ ರಿಂಗ್ಸ್ 1, 0123400700035563, ಬೀರಪ್ಪ ಶಿವು ಅಂಬಿಗ, 47000/–, ಚೈನ್ 1, 0123400700035611, ಬೀರಪ್ಪ ಶಿವು ಅಂಬಿಗ, 80000/–, ನೆಕ್ ಲೇಸ್ 1, 8462, ಗಣೇಶ್ ನಾಯಕ್, 99900/–, ಫಿಂಗರ್ ರಿಂಗ್ಸ್ 1,ಡ್ರಾಪ್ಸ್ & ಸ್ಟಡ್ 1,ಚೈನ್ 1, ಧಾರವಾಡ, ಕುಂದಗೋಳ, 5402, ಸಂಶಿ ದೇವೇಂದ್ರಪ್ಪ, 24487/–, ಫಿಂಗರ್ ರಿಂಗ್ಸ್ 1,ಡ್ರಾಪ್ಸ್ 1, ಕೊಪ್ಪಳ , ಎಲ್‌ಜಿ ರೋಡು ಗಂಗಾವತಿ, 5633, ಶೈಕ್ ಅಹಮದ್, 138200/–, ಫಿಂಗರ್ ರಿಂಗ್ಸ್ 1,ಸ್ಟಡ್ 1, 1876, ಹುಸೇನ್ ಸಬ, 31507/–, ಫಿಂಗರ್ ರಿಂಗ್ಸ್ 1, ಧಾರವಾಡ, ಲ್ಯಾಮಿಂಗ್‌ಟನ್ ರೋಡು ಹುಬ್ಬಳ್ಳಿ, 9291, ರೇಣುಕಾ ಮುಳಗುಂದ, 522000/–, ನೆಕ್ ಲೇಸ್ 1,ಚೈನ್ 1, 6405, ರೇಣುಕಾ ಮುಳಗುಂದ, 296700/–, ಬ್ರೇಸ್ ಲೆಟ್ 1,ನೆಕ್ ಲೇಸ್ 1,ಚೈನ್ 1, ಹಾವೇರಿ, ಮಾರ್ಕೆಟ್ ರೋಡು ಶಿಗ್ಗಾಂವ, 1759, ಮಹಮದ್ಜಾಫರ್ ಮಹ್ಮದ್ ಗೌಸ್ ಮುಲ್ಲಾ, 11800/–, ಫಿಂಗರ್ ರಿಂಗ್ಸ್ 1 0129890700051888, ಖ್ವಾಜಾ ಮೊದಿನ್ಸಾಬ್ ಖಲಂದರ್ ತಹಶೀಲ್ದಾರ್, 7800/–, ಫಿಂಗರ್ ರಿಂಗ್ಸ್ 1, 7158, ಉಮೇಶ್ ಯಲ್ಲನಗೌಡ ಪಾಟೀಲ್, 90089/–, ಚೈನ್ 1, ಧಾರವಾಡ, ಮೃತ್ಯುಂಜಯನಗರ, 6844, ರೇಣವ್ವ ಶಂಕರಗೌಡ ಪಾಟೀಲ, 17995/–, ಡ್ರಾಪ್ಸ್ 1, 0111980700086859, ಬಸನಗೌಡ ರುದ್ರಗೌಡ ಪಾಟೀಲ, 14800/–, ಫಿಂಗರ್ ರಿಂಗ್ಸ್ 1, 5612, ರಾಮೇಜಾ ಮಕಂದರ್, 31514/–, ಡ್ರಾಪ್ಸ್ 1, ಗದಗ , ಮುಂಡರಗಿ, 4423, ಶಾರುಖಾನ್ ಪಿ ನಾಸಿಕ್ವರ್, 31029/–, ಉ–ಡ್ರಾಪ್ಸ್ 1, ಗದಗ , ನರಗುಂದ, 0290, ಪ್ರಕಾಶ್ ಚಿಂತಾ, 12000/–, ಸ್ಟಡ್ 1, 2939, ಭೀಮಪ್ಪ ಬಾಳನ್ನವರ್, 34013/–, ಚೈನ್ 1, 0118660730012972, ಶಿವಪ್ಪ ಬಸನಪ್ಪ ಅಳಗವಾಡಿ, 35529/–, ಚೈನ್ 1, 0118660730012996, ಕುಮಾರಸ್ವಾಮಿ ಬಸಯ್ಯ ಬೆಳಕೊಪ್ಪ, 41035/–, ಸ್ಟಡ್ 1,ಚೈನ್ 1, ಧಾರವಾಡ, ನವಲಗುಂದ, 4272, ಯಲ್ಲಪ್ಪ ಫಕ್ಕೀರಪ್ಪ ಕೆಂಪಣ್ಣವರ್, 26000/–, ಫಿಂಗರ್ ರಿಂಗ್ಸ್ 1, 0120430700084383, ಶಿವಾನಂದ್ ಅಕ್ಕಿ, 98500/–, ನೆಕ್ ಲೇಸ್ 1,ಚೈನ್ 1, 9179, ಮಲ್ಲಪ್ಪ ಸಂಗಲಾದ್, 39030/–, ಫಿಂಗರ್ ರಿಂಗ್ಸ್ 1, ನವನಗರ, 6029, ಅರ್ಜುನ್ ಮದರ್, 87000/–, ಚೈನ್ 1, 5003, ಮಹಮ್ಮದ್ ಸಾದಿಕ್ ಧಾರವಾಡ, 121008/–, ಫಿಂಗರ್ ರಿಂಗ್ಸ್ 1, ಧಾರವಾಡ, ಓಲ್ಡ ಹುಬ್ಬಳ್ಳಿ, 5339, ಸಬೀನಾ ಬಾನು ಯಲಿವಾಲ್, 208030/–, ನೆಕ್ ಲೇಸ್ 1,ಡ್ರಾಪ್ಸ್ & ಸ್ಟಡ್ 1, ಬಳ್ಳಾರಿ, ಪಾರ್ವತಿ ನಾಗರ್ ಬಳ್ಳಾರಿ, 3055, ಉಮೇಶ್ ಜಿ, 39000/–, ಫಿಂಗರ್ ರಿಂಗ್ಸ್ 1, 3991, ಜಿ ಟೀನಾ, 74030/–, ಉ–ಡ್ರಾಪ್ಸ್ & ಸ್ಟಡ್ 1, ಧಾರವಾಡ, ರೈಲ್ವೆಸ್ಟೇಷನ್ ರೋಡು ಹುಬ್ಬಳ್ಳಿ, 3003, ಮಹೇಶ್ ಅರ್ಕಸಾಲಿ, 18000/–, ಸ್ಟಡ್ 1, 3397, ಶಿವರಾಜ್ ನಿಂಗನಗೌಡ ದೊಡ್ಡಮನಿ, 278002/–, ಚೈನ್ 1, ಹಾವೇರಿ, ರಾಣೇ ಬೆನ್ನೂರು, 5692, ನಾಗರಾಜ್, 14000/–, ಡ್ರಾಪ್ಸ್ 1, 0111400700078424, ಪ್ರಶಾಂತ್ ವಿ ಬಳಿಗಾರ್, 10035/–, ಇಯರ್ ರಿಂಗ್ಸ್ 1, 0111400700078842, ಬಸವರಾಜ ಹಾಲೇಶ್ ಲಮಾಣಿ, 7500/–, ಇಯರ್ ರಿಂಗ್ಸ್ 1, 4439, ಹಲಪ್ಪ ಹೊನ್ನಪ್ಪ ತಾರಾವರ್, 14423/–, ಡ್ರಾಪ್ಸ್ & ಸ್ಟಡ್ 1, ಗದಗ , ರೋಣ, 4902, ಜ್ಯೋತಿ ಕೊಂಡಬಿಂಗಿ, 55008/–, ಫಿಂಗರ್ ರಿಂಗ್ಸ್ 1, ಬಳ್ಳಾರಿ, ಸಂಡೂರು, 9444, ಟಿ ಇಮಾಮ್ ಬಾಷಾ, 54000/–, ಸ್ಟಡ್ 1, 0992, ಪ್ರೀಥಮ್ ನಾಯಕ್, 59008/–, ಉ–ಡ್ರಾಪ್ಸ್ 1, ಹಾವೇರಿ, ಶಿಗ್ಗಾಂವ, 0868, ರಮೇಶ್ ಗಂಗೇನೂರು, 80000/–, ಫಿಂಗರ್ ರಿಂಗ್ಸ್ 1,ಚೈನ್ 1, 0115810730030869, ರಮೇಶ್ ಗಂಗೇನೂರು, 32308/–, ಡ್ರಾಪ್ಸ್ & ಸ್ಟಡ್ 1, ಗದಗ , ಶಿರಹಟ್ಟಿ, 9427, ಕೆಂಚವ್ವ ಮಂಜಪ್ಪ ಹರಿಜನ, 28893/–, ಉ–ಡ್ರಾಪ್ಸ್ 1, 0118200730030057, ಹಜರೇಸಾಬ್ ಕೆ ಬಿಚ್ಚಗಟ್ಟಿ, 19606/–, ಡ್ರಾಪ್ಸ್ & ಸ್ಟಡ್ 1, 0118200730031891, ಶಫೀಕ್ ಮಾಬುಸಾಬ್ ಪರಿತ್, 32552/–, ಮಟ್ಟಿ 1, 0118200730031955, ಫಕೀರೇಶ್ ತಿರಕಪ್ಪ ಸುನಾಗರ್, 47843/–, ಡ್ರಾಪ್ಸ್ & ಸ್ಟಡ್ 1, ಉತ್ತರ ಕರ್ನಾಟಕ, ಸಿದ್ದಾಪುರ, 0204, ಸುರೇಶ್ ಬಿ ಗೌಡ, 14500/–, ಫಿಂಗರ್ ರಿಂಗ್ಸ್ 1, 1019, ಕಬೀರ್ ಬಸೀರ್ ಅಹಮದ್ ಶೇಖ್, 64870/–, ನೆಕ್ ಲೇಸ್ 1, ಉತ್ತರ ಕರ್ನಾಟಕ, ಸಿರಸಿ ಸಿ ಪಿ ಬಜಾರ್, 9455, ನವೀನ್ ಅಜ್ಜರಾಣಿ, 49000/–, ಚೈನ್ 2, 0119280700029473, ಜಯಂತ ರಾಮ ಚೆನ್ನಯ್ಯ, 12000/–, ಫಿಂಗರ್ ರಿಂಗ್ಸ್ 1, 0119280700029509, ರಮೇಶ್ ಡಿ ಬಡಿಗೇರ್, 10000/–, ಇಯರ್ ರಿಂಗ್ಸ್ 1, ಬಳ್ಳಾರಿ, ಸಿರುಗುಪ್ಪ, 5121, ಎಂ ಮಹಮ್ಮದ್, 38812/–, ಡ್ರಾಪ್ಸ್ & ಸ್ಟಡ್ 1, 0123440730025253, ಮುಸ್ತಾಫಾ, 44463/–, ಫಿಂಗರ್ ರಿಂಗ್ಸ್ 1, ಧಾರವಾಡ, ವಿದ್ಯಾನಗರ ಹುಬ್ಬಳ್ಳಿ, 0717, ವಿಶ್ವನಾಥ್ ಹಿರೇಮಠ್, 8500/–, ಡ್ರಾಪ್ಸ್ 1, 2787, ಸಚಿನ್ ನಾಯ್ಕರ್, 1200008/–, ಫಿಂಗರ್ ರಿಂಗ್ಸ್ 1,ಬ್ರೇಸ್ ಲೆಟ್ 1,ಚೈನ್ 1, 0122210730022921, ಗಣೇಶ್ ಅಂಕುಶಖಾನಿ ಕಲಾಲ್, 197061/–, ಬ್ರೇಸ್ ಲೆಟ್ 1,ಚೈನ್ 1, 0122210730022922, ಗಣೇಶ್ ಅಂಕುಶಖಾನಿ ಕಲಾಲ್, 199784/–, ಬ್ರೇಸ್ ಲೆಟ್ 1,ಚೈನ್ 1, 0122210730022925, ಪ್ರವೀಣ್ ಶೆಲವಡಿ, 347589/–, ಬ್ಯಾಂಗಲ್ 1, 0122210730022927, ಶ್ರೀದೇವಿ ಪಾಟೀಲ, 550002/–, ಬ್ಯಾಂಗಲ್ 1,ಚೈನ್ 1, 0122210730022967, ವೀಣಾ ಪತ್ತಾರ್, 42006/–, ಫಿಂಗರ್ ರಿಂಗ್ಸ್ 1, 0122210730023192, ಇಮ್ಯಾನುಯೆಲ್ ಆರ್ ಗುಬ್ಬಿ, 31008/–, ಫಿಂಗರ್ ರಿಂಗ್ಸ್ 1, ಕೊಪ್ಪಳ , ಯಲಬುರ್ಗಾ , 2428, ಶೇಖಪ್ಪ, 59763/–, ಚೈನ್ 1, 0119430730022479, ಸಕ್ರವ್ವ, 30007/–, ಫಿಂಗರ್ ರಿಂಗ್ಸ್ 1, 0119430730022676, ಚನ್ನಪ್ಪ, 30007/–, ಫಿಂಗರ್ ರಿಂಗ್ಸ್ 1, ಉತ್ತರ ಕರ್ನಾಟಕ, ಎಲ್ಲಾಪುರ, 4935, ರೇಣುಕಾ ಪ್ರಶಾಂತ್ ಮಂಗಳಿ, 9993/–, ಡ್ರಾಪ್ಸ್ 1, 1403, ಸಂಜು ಎಂ ಪಟಕರೆ, 99507/–, ಮಟ್ಟಿ 1,ಡ್ರಾಪ್ಸ್ & ಸ್ಟಡ್ 2,

ಮೇಲಿನ ಹರಾಜಿನಲ್ಲಿ ಭಾಗವಹಿಸಲು ಬಯಸುವ ವ್ಯಕ್ತಿಗಳು ಈ ಮುಂದೆ ತಿಳಿಸಿರುವುದನ್ನು ಅನುಸರಿಸತಕ್ಕದ್ದು:– ಆಸಕ್ತಿಯುಳ್ಳ ಸವಾಲು ಕೂಗುವವರು (ಬಿಡ್ಡರ್ ಗಳು) ಎನ್‌ಇಎಫ್ ಟಿ/ಆರ್ ಟಿಜಿಎಸ್ ವಿಧಾನದ ಮೂಲಕ ರೂ. 10,000/ ಅನ್ನು ಇಎಂಡಿ (ವಿಫಲಗೊಂಡ ಸವಾಲು ಕೂಗುವವರಿಗೆ ಮರುಪಾವತಿಯಾಗುವಂಥದ್ದು) ಆಗಿ ಹರಾಜಿನ ದಿನದಂದೇ ಸಲ್ಲಿಸಬೇಕು. ಸವಾಲು ಕೂಗುವವರು ಮಾನ್ಯವಾದ ಐಡಿ ಕಾರ್ಡ್/ಪ್ಯಾನ್ ಕಾರ್ಡ್ ಇಟ್ಟುಕೊಂಡಿರಬೇಕು. ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು 9072607147 ಅನ್ನು ಸಂಪರ್ಕಿಸಿ.

ಅಧಿಕೃತ ಅಧಿಕಾರಿ.
ಮಣಪ್ಪುರಂ ಫೈನಾನ್ಸ್ ಲಿ. ಪರವಾಗಿ

ಸಾರ್ವಜನಿಕ ನೋಟೀಸು

ನಮ್ಮ ಪಕ್ಷಗಾರರಾದ ಶ್ರೀ ತೇಜರಾಜು ಸಿದ್ದನಗೌಡ ಜನಗೌಡ, ಸಾ:ಧಾರವಾಡ ಇವರು ಕೊಟ್ಟ ಮಾಹಿತಿ ವ ಅಧಿಕಾರದ ಮೇಲಿಂದ ಕೊಡುವ ಸಾರ್ವಜನಿಕ ನೋಟೀಸ ಏನೆಂದರೆ:–

ಧಾರವಾಡ ಜಿಲ್ಲಾ, ಧಾರವಾಡ ತಾಲೂಕು, ಗರಗ ಹೋಬಳಿ, ಕಲ್ಲೂರ ಗ್ರಾಮದ ಶೇತ್ಕಿ ಜಮೀನು ಸರ್ವೆ/ಬ್ಲಾಕ ನಂ: 389/1, ಕ್ಷೇತ್ರ: 02ಎಕರೆ 11ಗುಂಟೆ 08ಆಣೆ ಇದ್ದು ಸದರ ಮೇಲ್ಕಂಡ ಆಸ್ತಿಯ ಮಾಲೀಕರಾದ 1) ಶ್ರೀಮತಿ ಪುಷ್ಪಾ ಕೋಂ ವೀರನಗೌಡ ಪಾಟೀಲ, 2) ಶ್ರೀಮತಿ ಸುಶ್ಮೀತಾ ವೀರನಗೌಡ ಪಾಟೀಲ (ಮದುವೆಯ ನಂತರ ಶ್ರೀಮತಿ ಸುಶ್ಮೀತಾ ಕೋಂ ಪ್ರವೀಣಕುಮರ ಗಡೇಕರ) 3) ಶ್ರೀಮತಿ ರೇಷ್ಮಾ ವೀರನಗೌಡ ಪಾಟೀಲ, (ಮದುವೆಯ ನಂತರ ಶ್ರೀಮತಿ ರೇಷ್ಮಾ ಕೋಂ ಸುನೀಲಕುಮಾರ ಬೆಳಗಾವಿ) 4) ವಿನಾಯಕ ತಂದೆ ವೀರನಗೌಡ ಪಾಟೀಲ ಎಲ್ಲರೂ ಸಾ: ಶಿವಾನಂದನಗರ, ಧಾರವಾಡ–580001 ಇವರ ಕಡೆಯಿಂದ ನಮ್ಮ ಪಕ್ಷಗಾರರು ಖರೀದಿ ಪಡೆಯುವರಿದ್ದಾರೆ ಕಾರಣ ಈ ಜಮೀನಿನ ಕುರಿತು ಯಾರದಾದರೂ ಹಕ್ಕು ಹಿತಾಸಕ್ತಿ, ಹಿತಸಂಬಂದ, ತಂಟೆ, ತಕರಾರು, ಉತ್ತಾರಾಧಿಕಾರ, ಮಾಲ್ಕಿ, ಬ್ಯಾಂಕ್ ಭೋಜಾ, ಒಟ್ಟು ಮೋಕ್ತಿಯಾರ ಪತ್ರ ವಗೈರೆಗಳು ಇದ್ದರೆ, ಅಂಥವರು ಈ ನೋಟಿಸ್ ಪ್ರಕಟವಾದ ದಿನದಿಂದ 07 ದಿನಗಳ ಒಳಗಾಗಿ ಈ ಕೆಳಕಂಡ ವಿಳಾಸಕ್ಕೆ ಲಿಖಿತ ದಾಖಲೆಗಳನ್ನು ಸಲ್ಲಿಸತಕ್ಕದ್ದು. ಒಂದು ವೇಳೆ ನಿಗದಿತ ಅವಧಿಯೊಳಗೆ ಯಾವುದೇ ತರಹದ ತಂಟೆ ತಕರಾರುಗಳು ಬಾರದೇ ಇದ್ದಲ್ಲಿ ಸದರಿ ಆಸ್ತಿಯ ಖರೀದಿ ದಸ್ತ ನೋಂದಣಿ ಮಾಡಿಕೊಳ್ಳುತ್ತಾರೆ. ತದನಂತರ ಬಂದ ಯಾವುದೇ ರೀತಿಯ ತಂಟೆ, ತಕರಾರುಗಳನ್ನು ಗಣನೆಗೆ ತೆಗೆದು ಕೊಳ್ಳುವದಿಲ್ಲ ಹಾಗೂ ನಮ್ಮ ಪಕ್ಷಗಾರರಿಗೆ ಬಂಧನಕಾರಿಯಾಗುವುದಿಲ್ಲ ಅಂತಾ ಕೊಟ್ಟ ಸಾರ್ವಜನಿಕ ನೋಟಿಸು.

ಸುಮಾ ಉಡಿಕೇರಿ, ವಕೀಲರು,
ವಿನಯನಗರ, ಕೆಲಗೇರಿ ರೋಡ,
ಧಾರವಾಡ ಧಾರವಾಡ–580008
29/06/2026 ಮೋ.ನಂ: 8073441072

ಸಾರ್ವಜನಿಕ ನೋಟೀಸು

ನಮ್ಮ ಪಕ್ಷಗಾರರಾದ 1) ಜ್ಯೋತಿ ಕೋಂ ಮಹೇಶ ಪಟ್ಟಣಶೆಟ್ಟಿ, 2) ವಾಹಾಂತೇಶ ಶೆಟ್ಟರ್, 3) ರಮೇಶ ಅಂಗಡಿ, 4) ಶೈಲಾ ಶಂಕರ ಕಡತಾಳ 5) ಮಹಾದೇವಿ ಚನ್ನಪ್ಪ ಗಾಣಿಗೇರ ಸಾ:ಧಾರವಾಡ ಇವರು ಕೊಟ್ಟ ಮಾಹಿತಿ ವ ಅಧಿಕಾರದ ಮೇಲಿಂದ ಕೊಡುವ ಸಾರ್ವಜನಿಕ ನೋಟೀಸ ಏನೆಂದರೆ:–

ಧಾರವಾಡ ಜಿಲ್ಲಾ, ಧಾರವಾಡ ತಾಲೂಕು, ಧಾರವಾಡ ವ್ಹಿ ಗ್ರಾಮದ ಬಿನ್ ಶೇತ್ಕಿ ಖುಲ್ಲಾ ಜಾಗೆ ಸರ್ವೆ/ಬ್ಲಾಕ ನಂ: 115/2, ಕ್ಷೇತ್ರ: 01ಎಕರೆ 18ಗುಂಟೆ 07ಆಣೆ ಇದರಲ್ಲಿ ಪೋಟ್ ಖರಾಬು : 08ಗುಂಟೆ ಒಟ್ಟು 01ಎಕರೆ 17ಗುಂಟೆ 15ಆಣೆ ಮೇಲ್ಕಂಡ ಆಸ್ತಿಯ ಮಾಲೀಕರಾದ 1) ಯಮನಪ್ಪ ತಂದೆ ಪೀರಪ್ಪ ಅಟಗಲ್, 2) ಹನುಮಂತಗೌಡ ತಂದೆ ಗುರುನಗೌಡ ಮುದಿಗೌಡ್ರ, 3) ಯಲ್ಲಪ್ಪ ತಂದೆ ಬಸಪ್ಪ ಭಾವಿಕಟ್ಟಿ, 4) ಜಯರಾವ ತಂದೆ ಮಹದೇವರಾವ ದೇಶಪಾಂಡೆ ಎಲ್ಲರೂ ಸಾ: ಧಾರವಾಡ ಇವರ ಕಡೆಯಿಂದ ನಮ್ಮ ಪಕ್ಷಗಾರರು ಖರೀದಿ ಪಡೆಯುವರಿದ್ದಾರೆ ಕಾರಣ ಈ ಜಮೀನಿನ ಕುರಿತು ಯಾರದಾದರೂ ಹಕ್ಕು ಹಿತಾಸಕ್ತಿ, ಹಿತಸಂಬಂದ, ತಂಟೆ, ತಕರಾರು, ಉತ್ತಾರಾಧಿಕಾರ, ಮಾಲ್ಕಿ, ಬ್ಯಾಂಕ್ ಭೋಜಾ, ಒಟ್ಟು ಮೋಕ್ತಿಯಾರ ಪತ್ರ ವಗೈರೆಗಳು ಇದ್ದರೆ, ಅಂಥವರು ಈ ನೋಟಿಸ್ ಪ್ರಕಟವಾದ ದಿನದಿಂದ 07 ದಿನಗಳ ಒಳಗಾಗಿ ಈ ಕೆಳಕಂಡ ವಿಳಾಸಕ್ಕೆ ಲಿಖಿತ ದಾಖಲೆಗಳನ್ನು ಸಲ್ಲಿಸತಕ್ಕದ್ದು. ಒಂದು ವೇಳೆ ನಿಗದಿತ ಅವಧಿಯೊಳಗೆ ಯಾವುದೇ ತರಹದ ತಂಟೆ ತಕರಾರುಗಳು ಬಾರದೇ ಇದ್ದಲ್ಲಿ ಸದರಿ ಆಸ್ತಿಯ ಖರೀದಿ ದಸ್ತ ನೋಂದಣಿ ಮಾಡಿ ಕೊಳ್ಳುತ್ತಾರೆ. ತದನಂತರ ಬಂದ ಯಾವುದೇ ರೀತಿಯ ತಂಟೆ, ತಕರಾರುಗಳನ್ನು ಗಣನೆಗೆ ತೆಗೆದು ಕೊಳ್ಳುವದಿಲ್ಲ ಹಾಗೂ ನಮ್ಮ ಪಕ್ಷಗಾರರಿಗೆ ಬಂಧನಕಾರಿಯಾಗುವುದಿಲ್ಲ ಅಂತಾ ಕೊಟ್ಟ ಸಾರ್ವಜನಿಕ ನೋಟಿಸು.

ಸುನೀಲ ಎಲ್.ಗುಡಿ, ವಕೀಲರು,
"ಶ್ರೀಸಾಯಿ" ಮನೆ ನಂ.32/5,
ಆದಿಶಕ್ತಿನಗರ, ಮದಿಹಾಳ,
ಧಾರವಾಡ ಮೋ.ನಂ: 9880271527

ಕ್ರಿಮಿನಲ್ ಮಿಸಲೇನಿಯಸ್ ನಂ.90/2026
ಮಾನ್ಯ 4ನೇ ಅಧಿಕ ದಿವಾಣಿ(ಹಿ.ವಿ) ನ್ಯಾಯಾಲಯ ಹಾಗೂ ಜೆ.ಎಮ್.ಎಫ್.ಸಿ, ಧಾರವಾಡ ಇವರ ನ್ಯಾಯಾಲಯದಲ್ಲಿ

ಅರ್ಜಿದಾರರು : ಶ್ರೀಮತಿ ಗಿರಿಜಾ ಕೋಂ ಚನ್ನಬಸಪ್ಪ ಪಮ್ಮನವರ **ವಿರುದ್ಧ**
ಎದುರುಗಾರರು: ಮಾನ್ಯ ತಹಶೀಲ್ದಾರರು ಜನನ ವ ಮರಣ ನೊಂದಣಿ ವಿಭಾಗ, ಧಾರವಾಡ

ದಿವಾಣಿ ಪ್ರಕ್ರಿಯೆ ಸಂಹಿತೆ ಆದೇಶ 5 ನಿಯಮ 20 (1)(ಎ) ಸಹ ಕಲಂ 151 ರಡಿ ನೋಟಿಸು

ಈ ಮೇಲ್ಕಾಣಿಸಿದ ಕೇಸಿನಲ್ಲಿ ಅರ್ಜಿದಾರರು ತಮ್ಮ ಅತ್ತೆಯಾದ ಶ್ರೀಮತಿ.ಯಮನವ್ವ ಕೋಂ ಸುರೇಶ ಪಮ್ಮನವರ ಇವರು ದಿ:22/12/1984 ರಂದು ನರೇಂದ್ರದ ತಮ್ಮ ಸ್ವಗೃಹದಲ್ಲಿ ಮರಣ ಹೊಂದಿರುತ್ತಾರೆ. ಅಂತಾ ಈ ಕುರಿತು ಮರಣ ಪ್ರಮಾಣ ಪತ್ರವನ್ನು ಪೂರೈಸುವಂತೆ ಆದೇಶ ಪಡೆಯುವ ಸಲುವಾಗಿ ಮಾನ್ಯ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿದ್ದು ಇರುತ್ತದೆ. ಅರ್ಜಿದಾರರು ಸಲ್ಲಿಸಿದ ಅರ್ಜಿಗೆ ಯಾರದಾದರೂ ತಂಟೆ, ವ ತಕರಾರು ವ ಹಿತಾಸಕ್ತಿ ಇದ್ದಲ್ಲಿ ಮಾನ್ಯ ನ್ಯಾಯಾಲಯಕ್ಕೆ ದಿನಾಂಕ: 22/07/2026 ರಂದು ಬೆಳಿಗ್ಗೆ 10.45 ಗಂಟೆಗೆ ಖುದ್ದಾಗಿ ಅಥವಾ ವಕೀಲರ ಮುಖಾಂತರ ಹಾಜರಾಗಿ ತಕರಾರು ಸಲ್ಲಿಸಬಹುದು. ತಪ್ಪಿದಲ್ಲಿ ಯಾವುದೇ ತಕರಾರು ಇಲ್ಲ ಅಂತಾ ಮುಂದೆ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಾಗುವುದು ಅಂತಾ ಕೊಟ್ಟ ನೋಟಿಸು.

ದಿ.24/06/2026 ರಂದು ನ್ಯಾಯಾಲಯದ ಸಹಿ ಮತ್ತು ಮೊಹರನೊಂದಿಗೆ ಕೊಡಲ್ಪಟ್ಟಿದೆ.

ಕೋರ್ಟ ಆದೇಶದ ಮೇರೆಗೆ
ಶಿರಸ್ತೇದಾರರು
ಮಾನ್ಯ 4 ನೇ ಅಧಿಕ ದಿವಾಣಿ(ಹಿ.ವಿ)
ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ
ಎ.ಎಮ್.ಮಸೂತಿ, ಧಾರವಾಡ.
ಅರ್ಜಿದಾರರ ಪರ ವಕೀಲರು, ಧಾರವಾಡ

ಕ್ರಿ.ಮಿ. ನಂ. 57/2026
ಮಾನ್ಯ 2ನೇ ಜೆ.ಎಮ್.ಎಫ್.ಸಿ. ನ್ಯಾಯಾಧೀಶರ ನ್ಯಾಯಾಲಯ, ಹುಬ್ಬಳ್ಳಿ ಇವರ ನ್ಯಾಯಾಲಯದಲ್ಲಿ

ಅರ್ಜಿದಾರ : ಶ್ರೀ ದೇವೇಂದ್ರಪ್ಪ ತಂದೆ ರಾಮಪ್ಪ ಗುಡಗಿ, ವಯಾ: 56 ವರ್ಷ, ಉದ್ಯೋಗ: ಶೇತ್ಕಿ ಕೆಲಸ, ಸಾ: ಕೋಳಿವಾಡ, ತಾ: ಹುಬ್ಬಳ್ಳಿ, ಜಿಲ್ಲಾ : ಧಾರವಾಡ

ವಿರುದ್ಧ

ಎದುರುಗಾರ : ಮಾನ್ಯ ತಹಶೀಲ್ದಾರರು, ಹುಬ್ಬಳ್ಳಿ ಗ್ರಾಮೀಣ, ಮಿನಿ ವಿಧಾನಸೌದ, ಹುಬ್ಬಳ್ಳಿ, ತಾ: ಹುಬ್ಬಳ್ಳಿ, ಜಿ: ಧಾರವಾಡ.

ನೋಟಿಸು

ಮೇಲ್ಕಂಡ ಪ್ರಕರಣವನ್ನು ಅರ್ಜಿದಾರನ ಅಜ್ಜನಾದ **ಶ್ರೀ ಕಲ್ಲಪ್ಪ ತಂದೆ ರಾಮಪ್ಪ ಗುಡಗಿ ಇವರು ದಿನಾಂಕ: 08-11-1960** ರಂದು ಧಾರವಾಡ ಜಿಲ್ಲೆಯ ಹುಬ್ಬಳ್ಳಿ ತಾಲೂಕ ಕುಸುಗಲ್ಲ ಗ್ರಾಮದ ಮನೆಯಲ್ಲಿ ಪೋತಿಯಾಗಿದ್ದು ಇರುತ್ತದೆ ಅಂತಾ ಮರಣ ಪ್ರಮಾಣ ಪತ್ರವನ್ನು ಪಡೆಯಲು ಈ ಅರ್ಜಿಯನ್ನು ದಾಖಲಿಸಿರುತ್ತಾರೆ.

ಈ ಕುರಿತು ಸಾರ್ವಜನಿಕರದು ಯಾರದಾದರೂ ಯಾವುದೇ ರೀತಿಯ ತಂಟೆ ತಕರಾರು ವಗೈರೆ ಇದ್ದಲ್ಲಿ ದಿ:30-07-2026 ರಂದು ಬೆಳಗಿನ 10-30 ಗಂಟೆಗೆ ಮುದ್ದತನ್ನು ಈ ನ್ಯಾಯಾಲಯದಲ್ಲಿ ನೇಮಿಸಿದ್ದು ಆ ದಿವಸ ತಾವಾಗಿ ಅಥವಾ ತಮ್ಮ ವಕೀಲರ ಮುಖಾಂತರ ತಕರಾರು ಸಲ್ಲಿಸಬೇಕು, ತಪ್ಪಿದಲ್ಲಿ ಪ್ರಕರಣವನ್ನು ನಿರ್ಣಯಿಸಲಾಗುವುದು.

ನನ್ನ ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನ ದಿ:27-06-2026 ರಂದು ಕೊಡಲ್ಪಟ್ಟಿತು.

ಕೋರ್ಟಿನ ಆಜ್ಞೆಯ ಮೇರೆಗೆ
ಹುಬ್ಬಳ್ಳಿ (ಕೋರ್ಟ ಮೊಹರು) ಸಹಿ/-ಶಿರಸ್ತೇದಾರರು
ದಿ:29-06-2026 ಮಾನ್ಯ 2ನೇ ಜೆ.ಎಮ್.ಎಫ್.ಸಿ.
(ಜಿ.ಡಿ.ಜಂತ್ಲಿ) ನ್ಯಾಯಾಧೀಶರ ನ್ಯಾಯಾಲಯ,
ಅರ್ಜಿದಾರರ ಪರ ವಕೀಲರು, ಹುಬ್ಬಳ್ಳಿ ಹುಬ್ಬಳ್ಳಿ

ನೈಋತ್ಯ ರೈಲ್ವೆ

ಟೆಂಡರು ಸೂಚನೆ ಸಂ.: L7265574
ದಿನಾಂಕ: 19.06.2026

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಐಆರ್‌ಇಪಿಎಸ್ ಮೂಲಕ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಸಂಕ್ಷಿಪ್ತ ವಿವರಣೆ: ಪ್ಲೇನ್ ಮೈಕ್ ಸ್ಟಾಂಡರ್ಡ್ ಸಹಾಯಕ ಭಾಗಗಳೊಂದಿಗೆ ಡಿಜಿಟಲ್ ವಿಹೆಚ್‌ಎಫ್ 25 ವ್ಯಾಟ್ ರೇಡಿಯೊದ ಪೂರೈಕೆ ಮತ್ತು ಪರಿಶೀಲನೆ. (ಪರಿಮಾಣ: 160 ನಂ.).

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ:
20.07.2026, 10:30 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ಸಾಮಗ್ರಿ ವ್ಯವಸ್ಥಾಪಕರು
PUB/237/AAF/PRB/SWR/2026-27 ಹುಬ್ಬಳ್ಳಿ

ಸುಲಭ ಟಿಕೆಟ್ ಬುಕಿಂಗ್, PNR ಸ್ಥಿತಿ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ RailOne ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway - SWR | SWRRLY | SWRAILWAYHQ | sw_railways

ನೈಋತ್ಯ ರೈಲ್ವೆ

ಟೆಂಡರು ಸೂಚನೆ ಸಂ. 42MECHWELDINGGAS CUTTING ದಿನಾಂಕ: 24.06.2026

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಸಂಕ್ಷಿಪ್ತವಾದ ವಿವರಣೆ	ಅಂದಾಜು ಮೌಲ್ಯ
ಹೊಸಪೇಟೆ, ಜಿಂದಾಲ್ ಮತ್ತು ನವಲೂರು ಡಿಪೋಗಳಲ್ಲಿ ಎರಡು ವರ್ಷಗಳ ಅವಧಿಗೆ ವ್ಯಾಗನ್‌ಗಳ ವೆಲ್ಡಿಂಗ್ ಮತ್ತು ಗ್ಯಾಸ್ ಕಟಿಂಗ್ ಕಾಮಗಾರಿಗಳಿಗಾಗಿ ಹೊರಗುತ್ತಿಗೆ.	ರೂ. 12,64,83,604.69

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ:
14.07.2026, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ಮೆಕ್ಯಾನಿಕಲ್ ಇಂಜಿನಿಯರ್ ಸಿ ಮತ್ತು ಡಬ್ಲ್ಯೂ / ಹುಬ್ಬಳ್ಳಿ
PUB/246/AAF/PRB/SWR/2026-27

ಸುಲಭ ಟಿಕೆಟ್ ಬುಕಿಂಗ್, PNR ಸ್ಥಿತಿ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ RailOne ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway - SWR | SWRRLY | SWRAILWAYHQ | sw_railways